

ಕರ್ನಾಟಕ ಹಾಗೂ ತಮಿಳುನಾಡು ಬೇರ್ಪಡಿಸುವ ತೂಗುಸೇತುವೆ



ಗೋಪಿನಾಥಂ ಕೆರೆ

ಹರಿದು ಬರುವ ಕಾವೇರಿ, ನಲಿದು ನರ್ತಿಸಿ ಪಾಲಮಡು ಎಂಬಲ್ಲಿ ಧುಮ್ಮಿಕ್ಕುತ್ತಾಳೆ. ಆಗ ಒಟ್ಟಿಗೆ 36 ಜಲಪಾತಗಳು ಸೃಷ್ಟಿಯಾಗುತ್ತವೆ. ಜಲಪಾತಗಳು ರಭಸದಿಂದ ನೆಲ ಸೇರುವಾಗ ನೀರಿನ ವೇಗ ಹೆಚ್ಚಾಗಿರುತ್ತದೆ. ಅದಕ್ಕೆ 'ದೊಡ್ಡಬಾನಿ' ಎಂದು ಕರೆಯಲಾಗಿದೆ. ನೀರು ಧುಮ್ಮಿಕ್ಕುವ ರಭಸಕ್ಕೆ ಸಣ್ಣ ಹನಿಗಳು ಗಾಳಿಯೊಂದಿಗೆ ಸೇರಿ ದಟ್ಟಹೊಗೆಯ ಸ್ವರೂಪ ಪಡೆಯುತ್ತದೆ. ಇದರಿಂದಲೇ ಇದಕ್ಕೆ ಹೊಗೇನಕಲ್ ಎಂಬ ಹೆಸರು. ಈ ದಟ್ಟ ಹೊಗೆಯ ರಚನೆಯೇ ಜಲಪಾತದ ಪ್ರಮುಖ ಆಕರ್ಷಣೆ.

ಜಲಪಾತದಿಂದ ಬಿದ್ದು ಹರಿಯುವ ನೀರಿನ ಪ್ರದೇಶ 70ಕ್ಕೂ ಹೆಚ್ಚು ಅಡಿ ಆಳವಿದೆ. ಈ ನೀರ ಆವರಿಸುವಿಕೆಯಲ್ಲಿ ಅಲ್ಲಲ್ಲಿ ಕಿರು ದ್ವೀಪಗಳು ಸೃಷ್ಟಿಯಾಗಿವೆ. ಕರ್ನಾಟಕದ ಭಾಗದಿಂದ ತೆರಳಿ ಕಲ್ಲು ಬಂಡೆ ಹತ್ತಿ ಇಳಿದು ನೀರು ಜಲಧಾರೆಯಾಗಿ ಇಳಿಯುವ ಪಾಲಮೇಡು ಎನ್ನುವಲ್ಲಿಗೆ ತೆರಳಿದರೆ, ಅಲ್ಲಿ ಜಲಧಾರೆಯ ಇನ್ನೊಂದು ಬಗೆಯ ಸೌಂದರ್ಯದ ದರ್ಶನವಾಗುತ್ತದೆ. ನೀರಿನ ಹೊಡೆತಕ್ಕೆ ಸವೆದು ತರಹೇವಾರಿ ಆಕಾರದಲ್ಲಿ ಕೊರಕಲಾದ ಕಲ್ಲುಬಂಡೆಗಳ ಸೊಬಗು ಮನಸೆಳೆಯುತ್ತದೆ. ಕೊಡಗಿನಲ್ಲಿ ಹುಟ್ಟುವ ಕಾವೇರಿ ತಮಿಳುನಾಡಿಗೆ ಪ್ರವೇಶಿಸುವ ಹೆಬ್ಬಾಗಿಲಿದು.

ಪ್ರವಾಸಿಗರ ಹಸಿವು–ದಾಹವನ್ನು ನೀಗಿಸಲು ನೀರಿನ ಮೇಲೆಯೇ ತೆಪ್ಪದಲ್ಲಿ ತಂಪು ಪಾನೀಯ, ಕುರುಕಲುಗಳನ್ನು ಮಾರುವ ಸಂಚಾರಿ ಅಂಗಡಿಗಳಿವೆ. ಅಲ್ಲಲ್ಲಿ ಬಂಡೆಯ ಮೇಲೆ ಒಲೆ ಇಟ್ಟು, ಮೀನಿನ ಖಾದ್ಯ ತಯಾರಿಸಿಕೊಡುವ ಮಹಿಳೆಯರು ಕಾಣಸಿಗುತ್ತಾರೆ. ನೀರಿನ ಪ್ರಮಾಣ ಕಡಿಮೆಯಾದಾಗ ಪ್ರವಾಸಿಗರ ಸಂಖ್ಯೆ ಕ್ಷೀಣಿಸಿತ್ತು. ಪರಿಣಾಮ ತುತ್ತಿನ ಚೀಲ ತುಂಬಿಸಿಕೊಳ್ಳಲು ತಮಿಳುನಾಡಿನ ವಿವಿಧ ಭಾಗಗಳಿಗೆ ಕೂಲಿಯರಸಿ ಹೋಗಿದ್ದ ಇಲ್ಲಿನ ಜನರು, ಮಳೆ ಚುರುಕಾದ ಮೇಲೆ ಗ್ರಾಮಗಳಿಗೆ ಮರಳಿದ್ದು, ಅಂಗಡಿ ಮುಂಗಟ್ಟುಗಳನ್ನು ಮತ್ತೆ ತೆರೆದಿದ್ದಾರೆ.

ಗೋಪಿನಾಥಂ ಮಿಸ್ಟ್ರೀ ಟ್ರೇಲ್ ಕ್ಯಾಂಪ್‌ನಲ್ಲಿ ಪ್ರವಾಸಿಗರ ವಾಸ್ತವ್ಯಕ್ಕಾಗಿ ತೆರೆಯಲಾಗಿರುವ ಟೆಂಟ್‌ಗಳು



## ಗರಿಗೆದರಿದ ಪ್ರವಾಸೋದ್ಯಮ

ಮೂರು ದಶಕಗಳ ಕಾಲ ವೀರಪ್ಪನ್ ಅಟ್ಟಹಾಸಕ್ಕೆ ನಲುಗಿಹೋಗಿದ್ದ ಗಡಿಭಾಗ ಕಳೆದ ಐದಾರು ವರ್ಷಗಳಿಂದ ಪ್ರವಾಸೋದ್ಯಮ ಚಟುವಟಿಕೆ ಕೇಂದ್ರವಾಗಿ ಮಾರ್ಪಟ್ಟಿದೆ. ಬಹುಜನರ ಆರಾಧ್ಯದೈವ ಮಲೆಮಹದೇಶ್ವರ ಬೆಟ್ಟಕ್ಕೆ ಬರುವ ಭಕ್ತರು ಹೊಗೇನಕಲ್ ರಮಣೀಯ ಸೌಂದರ್ಯವನ್ನು ಆಸ್ವಾದಿಸಿ ತೆರಳುತ್ತಾರೆ. ಪ್ರತಿ ಶನಿವಾರ ಮತ್ತು ಭಾನುವಾರ ಹಾಗೂ ರಜಾದಿನಗಳಲ್ಲಿ ಬೆಂಗಳೂರು ಹಾಗೂ ತಮಿಳುನಾಡಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಾರೆ. ಕಾವೇರಿ ಹಾಗೂ ಮಲೆಮಹದೇಶ್ವರ ವನ್ಯಧಾಮದ ದಟ್ಟ ಕಾನನದೊಳಗೆ ಸಾಗುತ್ತಿರುವಾಗಲೇ ವಾಹನಗಳಿಗೆ ಅಡ್ಡಲಾಗಿ ನುಗ್ಗುವ, ರಸ್ತೆ ಬದಿಯಲ್ಲಿ ನಿಂತು ಸ್ವಚ್ಛಂದವಾಗಿ ಮೇಯುತ್ತಿರುವ ವನ್ಯಮೃಗಗಳು ಪ್ರವಾಸಿಗರನ್ನು ಮತ್ತಷ್ಟು ಪುಳಕಿತರನ್ನಾಗಿಸುತ್ತದೆ.

## ಮಿಸ್ಟ್ರೀ ಟ್ರೇಲ್ ಕ್ಯಾಂಪ್

ವಾರಾಂತ್ಯದಲ್ಲಿ ರಾಜ್ಯದ ವಿವಿಧ ಕಡೆಗಳಿಂದ ಜಲಪಾತ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರಿಗೆ ವಾಸ್ತವ್ಯದ ಸಮಸ್ಯೆ ಎದುರಾಗುತ್ತಿತ್ತು. ಆ ತೊಂದರೆಯನ್ನು ನಿವಾರಿಸುವ ಸಲುವಾಗಿ ಅರಣ್ಯ ಇಲಾಖೆ ಗೋಪಿನಾಥಂ ಮಿಸ್ಟ್ರಿ ಟ್ರೇಲ್ ಕ್ಯಾಂಪ್‌ನಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಕಲ್ಪಿಸಿದೆ. ಮಲೆಮಹದೇಶ್ವರ ಬೆಟ್ಟದಿಂದ 48 ಕಿ.ಮೀ. ದೂರದಲ್ಲಿರುವ ಈ ಕ್ಯಾಂಪ್‌ಗೆ ಕಾವೇರಿ ಮತ್ತು ಮಲೆಮಹದೇಶ್ವರ ಅಭಯಾರಣ್ಯಗಳೊಳಗೆ ಸಾಗಬೇಕು. ಬೆಟ್ಟಗುಡ್ಡಗಳ ತಿರುವುಗಳ ಹಾದಿಯ ನಡುವೆ ಸಾಗುವಾಗಲೇ ಜಲಪಾತದ ಇರುವಿಕೆಯ ಅನುಭವವಾಗುತ್ತದೆ.

ಪಾಲಾರ್‌ನಿಂದ ಹೊರಟು ಗೋಪಿನಾಥಂ ಹೆಬ್ಬಾಗಿಲಿನಲ್ಲೇ ಅರಣ್ಯ ಇಲಾಖೆ ವಲಯ ಅರಣ್ಯಾಧಿಕಾರಿಗಳ ಕಚೇರಿ ಎದುರಾಗುತ್ತದೆ. ಇದರಿಂದ ಎಡಕ್ಕೆ ಅರ್ಧ ಮೈಲಿ ಸಾಗಿದರೆ ಬೆಟ್ಟಗುಡ್ಡಗಳ ನಡುವಿನ ಗೋಪಿನಾಥಂ ಡ್ಯಾಂನ ಮೇಲೆ ಈ ಕ್ಯಾಂಪ್ ನಿರ್ಮಾಣ ಮಾಡಲಾಗಿದೆ. ಇಲ್ಲಿ 10 ಟೆಂಟ್‌ಗಳಿದ್ದು, ಒಂದು ಡಾರ್ಮೆಟ್ರಿ ಇದೆ. ವಾಸ್ತವ್ಯಕ್ಕೆ ಮುಂಗಡವಾಗಿ ರೂಮ್ ಬುಕ್ಕಿಂಗ್ ವ್ಯವಸ್ಥೆಯೂ ಇದೆ. **dcfcauverywl@gmail.com** ಇ–ಮೇಲ್‌ಗೆ ಮನವಿ ಕಳುಹಿಸಿ, ಮುಂಗಡವಾಗಿ ಅರ್ಜಿ ಸಲ್ಲಿಸಿ ವಾಸ್ತವ್ಯದ ವ್ಯವಸ್ಥೆ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಸಂಪರ್ಕ ಸಂಖ್ಯೆ: 08224–253027.